ಅ. ಇತ್ತೀಚಿನ ವಿದೇಶಿ ಪ್ರವಾಸದ ಸಮಯದಲ್ಲಿ ರಾಜ್ಯದಲ್ಲಿ ವಿದೇಶಿ ಸಂಸ್ಥೆಗಳಿಂದಾಗಲಿ ಅಥವಾ ಅನಿವಾಸಿ ಭಾರತೀಯರಿಂದಾಗಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ ಚರ್ಚಿಸಲಾಯಿತೆ ?

ಆ. ಈ ಸಂಬಂಧವಾಗಿ ಎಷ್ಟು ವಿದೇಶಿ ಕಂಪನಿಗಳೊಂದಿಗೆ ಒಪ್ಪಂದಗಳಿಗೆ ಸಹಿ ಮಾಡಲಾಗಿದೆ (ಎಂ.ಒ.ಯ) ಹಾಗೂ ಎಷ್ಟು ಅನಿವಾಸಿ ಭಾರತೀಯರು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಆಸಕ್ತಿ ತೋರಿದ್ದಾರೆ ?

ಇ. ಇತ್ತೀಚಿನ ಕೈಗಾರಿಕಾ ಸಚಿವರ ವಿದೇಶಿ ಪ್ರವಾಸದಿಂದ ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಯಾವ ರೀತಿ ಸಹಕಾರಿಯಾಗಿದೆ ?

ಈ. ಒಪ್ಪಂದದ ಸಂಬಂಧವಾಗಿ ವಿದೇಶಿ ಕಂಪನಿಗಳಿಗೆ ಅಥವಾ ಸಂಸ್ಥೆಗಳಿಗೆ ರಾಜ್ಯದಿಂದ ಪಾವತಿ ಮಾಡಲಾಗಿರುವ ಟೆಕ್ನಾಲಜಿ ಶುಲ್ಕ ಅಥವಾ ಇತರೆ ಶುಲ್ಕಗಳ ಮೊತ್ತವೆಷ್ಟು ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ. ಹೌದು

ಆ. (ಕೆ.ಎಸ್.ಐ.ಐ.ಡಿ.ಸಿ) ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತವು ಐದು ಒಪ್ಪಂದಕ್ಕೆ (ಎಂ.ಒ.ಯು) ಇಸ್ರೇಲಿ ಕಂಪನಿಗಳೊಂದಿಗೆ ಸಹಿ ಮಾಡಿದೆ.

ಇ. ಸಚಿವರು ವಿದೇಶದಲ್ಲಿ ಪ್ರವಾಸ ಮಾಡಿದಾಗ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆ ಇಂದು ಅನುಕೂಲಕರ ಅವಕಾಶ ಇರುವುದನ್ನು ವಿದೇಶಿ ಉದ್ಯಮಿದಾರರಿಗೆ ಮನದಟ್ಟು ಮಾಡಿಕೊಟ್ಟಿರುತ್ತಾರೆ. ಹೀಗಾಗಿ ಹಲವಾರು ಉದ್ಯಮಿದಾರರು ರಾಜ್ಯದಲ್ಲಿ ಆಧುನಿಕ ತಂತ್ರಜ್ಞಾನದ ಉದ್ಯಮಗಳನ್ನು ಸ್ಥಾಪಿಸಲು ಮುಂದೆ ಬಂದಿರುತ್ತಾರೆ.

ಈ. ತಾಂತ್ರಿಕ ಶುಲ್ಕವನ್ನು ಒಳಗೊಂಡಂತೆ ಯೋಜನಾ ವಿವರಗಳು ಯೋಜನೆಯನ್ನು ಅಂತಿಮಗೊಳಿಸಿದ ನಂತರವೇ ತಿಳಿದು ಬರುವುದು.

ವಿಷಯ : ಬೆಂಗಳೂರಿನಲ್ಲಿ ಪ್ರಾರಂಭಿಸಲಾಗುವ ಟೆಕ್ನಾಲಿಜಿ ಪಾರ್ಕ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ761 (711)

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಬೆಂಗಳೂರಿನ ಯಾವ ಸ್ಥಳದಲ್ಲಿ ಟೆಕ್ನಾಲಜಿ ಪಾರ್ಕನ್ನು ಸ್ಥಾಪಿಸಲು ಸರ್ಕಾರದವರು ನಿರ್ಧರಿಸಿರುವರು ?

ಆ. ಇದರ ಅಡಿಗಲ್ಲು ಸಮಾರಂಭ ಯಾವಾಗ ನೆರವೇರಿತು ?

ಇ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಸಿಕ್ಕಿದೆಯೇ ? ಕೇಂದ್ರದಿಂದ ಇದಕ್ಕೆ ಬರಲಿರುವ ಧನ ಸಹಾಯವೆಷ್ಟು ? ಹಾಗೂ ರಾಜ್ಯ ಸರ್ಕಾರ ಎಷ್ಟು ಹಣವನ್ನು ಖರ್ಚು ಮಾಡಲಿದೆ ?

ಈ. ಯಾವ ಯಾವ ರಾಷ್ಟ್ರಗಳ ಸಹಯೋಗದೊಂದಿಗೆ ಇದನ್ನು ಪ್ರಾರಂಭಿಸಲಾಗುವುದು ?

ಉ. ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಇದು ಯಾವ ರೀತಿ ಸಹಕಾರಿಯಾಗಲಿದೆ ?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ. ಬೆಂಗಳೂರಿನಿಂದ 18 ಕಿ.ಮೀ. ದೂರದಲ್ಲಿ ಬೆಂಗಳೂರು ವೈಟ್‌ಫೀಲ್ಡ್ ರಸ್ತೆಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಸಾದರಮಂಗಲ ಮತ್ತು ಪಟ್ಟಂದೂರು ಅಗ್ರಹಾರ ಗ್ರಾಮಗಳ 55 ಎಕರೆ 19 ಗುಂಟೆ ಜಮೀನಿನಲ್ಲಿ ಟೆಕ್ನಾಲಜಿ ಪಾರ್ಕ್ ಸ್ಥಾಪನೆಯಾಗಲಿದೆ.

ಆ. ಯೋಜನಾ ಪ್ರಾರಂಭಿಕ ಸಮಾವೇಶವು ದಿನಾಂಕ 28.1.1994 ರಂದು ನೆರವೇರಿತು.

ಇ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಸಿಕ್ಕಿದೆ. ಕೇಂದ್ರ ಸರ್ಕಾರ ಇದರಲ್ಲಿ ಭಾಗವಹಿಸುತ್ತಿಲ್ಲ. ರಾಜ್ಯ ಸರ್ಕಾರವು ಕೆ.ಐ.ಎ.ಡಿ.ಬಿ.ಯ ಮುಖಾಂತರ ಶೇಕಡ 20 ರಷ್ಟು ಈಕ್ವಿಟಿಯನ್ನು ತೊಡಗಿಸುವುದರ ಮೂಲಕ ಇದರಲ್ಲಿ ಭಾಗವಹಿಸುತ್ತಿದೆ.

ಈ. ಸಿಂಗಾಪೂರ್ ದೇಶದ ಇನ್‌ಫರ್ಮೇಷನ್ ಟೆಕ್ನಾಲಜಿ ಪಾರ್ಕ್ ಪಿ.ಯ.ಟಿ.ಯ.ಇ ಲಿಮಿಟೆಡ್ ಸಂಸ್ಥೆಯ ಸಹಯೋಗದೊಂದಿಗೆ ಇದನ್ನು ಪ್ರಾರಂಭಿಸಲಾಗುತ್ತಿದೆ.

ಉ. ಈ ಟೆಕ್ನಾಲಜಿ ಪಾರ್ಕ್‌ನಲ್ಲಿ ಸ್ಥಾಪನೆಯಾಗಲಿರುವ ಉದ್ದಿಮೆಗಳ ಬಂಡವಾಳವು ಸುಮಾರು 2 ಸಾವಿರ ಕೋಟಿ ಎಂದು ಅಂದಾಜು ಮಾಡಲಾಗಿದೆ. ಸುಮಾರು 17 ಸಾವಿರ ಜನರಿಗೆ ಉದ್ಯೋಗಾವಕಾಶ ದೊರಕಲಿದೆ. ಮಿತ ಅಂದಾಜಿನ ಪ್ರಕಾರ ಸದರಿ ಕಂಪನಿಗಳ ವ್ಯಾಪಾರವು ಮೊದಲನೇ ವರ್ಷದಲ್ಲಿ ಎರಡು ಸಾವಿರ ಕೋಟಿ ರೂಪಾಯಿಗಳಿಗೂ ಮೀರಲಿದ್ದು ಅದರಲ್ಲಿ ಶೇಕಡ 60 ರಿಂದ 65 ಭಾಗ ರಫ್ತಾಗುವ ನಿರೀಕ್ಷೆಯಿದೆ. ಟೆಕ್ನಾಲಜಿ ಪಾರ್ಕ್‌ನಲ್ಲಿ ಅಂತರರಾಷ್ಟ್ರೀಯ ಮಟ್ಟದ ಮೂಲಭೂತ ಸೌಕರ್ಯಗಳನ್ನು ಒದಗಿಸಲಿದ್ದು, ಹೆಚ್ಚಿನ ತಂತ್ರಜ್ಞಾನದ ಕಂಪ್ಯೂಟರ್ ಟೆಲಿಕಮ್ಯೂನಿಕೇಷನ್ ಎಲೆಕ್ಟ್ರಾನಿಕ್ ಮತ್ತು ಇತರೆ ಸಂಬಂಧಿತ ಕೈಗಾರಿಕೆಗಳ ಸ್ಥಾಪನೆಗೆ ನಾಂದಿಯಾಗುವುದು. ಇದರಿಂದ ಪೂರಕ ಉದ್ದಿಮೆಗಳ ಬೆಳವಣಿಗೆಗೂ ಅವಕಾಶವಾಗಲಿದೆ.

ವಿಷಯ : ಪುತ್ತೂರು ಪುರಸಭೆ ವ್ಯಾಪ್ತಿಯಲ್ಲಿರುವ ಜನರಿಗೆ ಕುಡಿಯುವ ನೀರಿನ್ನು ಒದಗಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 762 (975)

ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ಪುರಸಭೆಯ ವ್ಯಾಪ್ತಿಯಲ್ಲಿರುವ ಜನರಿಗೆ ಕುಡಿಯುವ ನೀರಿನ ಶ್ರಮವನ್ನು ತಪ್ಪಿಸುವ ಬಗ್ಗೆ ಪುತ್ತೂರು ಪುರಸಭೆಯು ತನ್ನ ಪಾಲನ್ನು ದೇಣಿಗೆಯಾಗಿ ಕೊಟ್ಟಿರುವುದು ನಿಜವೇ ?